ಅವರ ಈ ಹೊಸತನದ ಅನ್ವೇಷಣೆಯ ಫಲವೇ 'ಹಂಸಗೀತೆ'. ಈ ಚಿತ್ರ ಭಾರತದಲ್ಲಿ ಮಾತ್ರವಲ್ಲ, ವಿದೇಶದಲ್ಲಿ ಕೂಡ ಮೆಚ್ಚುಗೆ ಪಡೆಯಿತು. ಭಾರತೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಗೊಂಡು ತಾಷ್ಕೆಂಟ್‌ನಲ್ಲಿ ಪ್ರದರ್ಶನಗೊಂಡಿತು. ರಷ್ಯಾದ ಭಾರತೀಯ ಸಾಂಸ್ಕೃತಿಕೋತ್ಸವದಲ್ಲಿ ಕೂಡ ಪ್ರದರ್ಶನಗೊಂಡಿತು.

ದೇಶದಲ್ಲಿ ಮೊದಲ ಸಂಸ್ಕೃತ ಚಿತ್ರ 'ಶಂಕರಾಚಾರ್ಯ' ಮಾಡಿದ ಕೀರ್ತಿಯೂ ಅಯ್ಯರ್ ಅವರದೇ. 'ಹಂಸಗೀತೆ'ಯೂ ಸೇರಿದಂತೆ ಅಯ್ಯರ್ ಅವರ ನೆನಪಿನಲ್ಲಿ ಉಳಿಯುವ ಚಿತ್ರಗಳೆಂದರೆ: 'ನಾಳೆಗಳನ್ನು ಮಾಡುವವರು', 'ಶಂಕರಾಚಾರ್ಯ', 'ಮಧ್ವಾಚಾರ್ಯ', 'ರಾಮಾನುಜಾಚಾರ್ಯ', 'ಭಗವದ್ಗೀತಾ' ಹಾಗೂ 'ಸ್ವಾಮಿ ವಿವೇಕಾನಂದ'. ಅಯ್ಯರ್ ಅವರ 'ಕುದುರೆಮೊಟ್ಟೆ' ಹಾಗೂ, 'ವಾಲ್ ಪೋಸ್ಟರ್' ಬಿಡುಗಡೆಯಾಗದ ಚಿತ್ರಗಳು. ಐದು ವರ್ಷಗಳ ಹಿಂದೆ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅಯ್ಯರ್ ಅವರ ಜನ್ಮ ಶತಮಾನೋತ್ಸವದ ನೆನಪಿಗಾಗಿ 'ಹಂಸಗೀತೆ'ಯನ್ನು ಪ್ರದರ್ಶಿಸಿ ಗೌರವಿಸಲಾಯಿತು.

## ದಿಗ್ಗಜರ ಸಮಾಗಮ

'ಹಂಸಗೀತೆ' ಚಿತ್ರ ಒಂದು ರೀತಿಯಲ್ಲಿ ಪ್ರತಿಭಾವಂತರ ಸಮಾಗಮದ ಫಲವೆನ್ನಬೇಕು. ಈ ಚಿತ್ರದ ಕಲ್ಪನಾತ್ಮಕ-ಕಾವ್ಯಾತ್ಮಕ ಛಾಯಾಗ್ರಹಣ ಮಾಡಿದವರು, ಖ್ಯಾತ ಸಿನೆಮಾಟೋಗ್ರಾಫರ್ ನೆಮಾಯ್ ಘೋಷ್. ಇವರು ಸತ್ಯಜಿತ್ ರೇ ಅವರನ್ನು ನೆರಳಿನಂತೆ ಹಿಂಬಾಲಿಸಿ ಚಿತ್ರಿಸಿದ ಛಾಯಾಗ್ರಾಹಕ. ಹೃದಯಂಗಮ ಸಂಗೀತ ನೀಡಿದವರು ನಾದದ ನವನೀತ ಡಾ. ಬಾಲಮುರಳಿಕೃಷ್ಣ, ಹಿನ್ನೆಲೆ ಸಂಗೀತ ಬಿ.ವಿ. ಕಾರಂತರದ್ದು. ಈ ಚಿತ್ರದಲ್ಲಿ ಸದಾನಂದ ಬುವಾ ಪಾತ್ರವನ್ನು ಕೂಡ ಅವರೇ ನಿರ್ವಹಿಸಿ, ಚಿತ್ರಕ್ಕೆ ಜೀವ ತುಂಬಿದ್ದಾರೆ. ಈ ಚಿತ್ರದ ಕಲಾತ್ಮಕ ನಿರ್ದೇಶಕ ಪಿ. ಕೃಷ್ಣಮೂರ್ತಿ. 'ಈ ಚಿತ್ರಕ್ಕೆ ಕಲಾ ನಿರ್ದೇಶನ ಮಾಡುವಾಗ ಕೃಷ್ಣಮೂರ್ತಿ ಅವರಿಗೆ ಕಲಾ ನಿರ್ದೇಶನದ ಗಂಧ-ಗಾಳಿ ಗೊತ್ತಿರಲಿಲ್ಲ. ಅವರೊಬ್ಬ ಖ್ಯಾತ ಕಲಾವಿದ. ಆದರೆ ಚಿತ್ರದುರ್ಗದ ಕೋಟೆಯನ್ನು ಹಿನ್ನೆಲೆಯಾಗಿ ಬಳಸಿಕೊಂಡು ಚಿತ್ರವನ್ನು ಬೇರೊಂದು ಎತ್ತರಕ್ಕೆ ತೆಗೆದುಕೊಂಡು ಹೋದದ್ದು ಇಂದು ಇತಿಹಾಸ' ಎಂದು ಅಯ್ಯರ್ ಕೆಲವು ವರ್ಷಗಳ ಹಿಂದೆ ಈ ಬರಹಗಾರನೊಂದಿಗೆ ಮಾತನಾಡುತ್ತಾ ಹೇಳಿದ್ದು ಈಗಲೂ ನೆನಪಾಗುತ್ತಿದೆ. ಈ ಚಿತ್ರದ ನೃತ್ಯ ನಿರ್ದೇಶನ ಮಾಡಿದವರು ಮತ್ತು ಕೊರಿಯೋಗ್ರಫಿ ನೆರವು ನೀಡಿದವರು, ರಾಧಾಕೃಷ್ಣ ಮತ್ತು ಅಡ್ಯಾರ್ ಕೆ. ಲಕ್ಷ್ಮಣ್. ಚಿತ್ರದ ಒಂದು ದೃಶ್ಯದಲ್ಲಿ ನರ್ತಿಸಿದ ಕಲಾವಿದೆ ಕಲಾಕ್ಷೇತ್ರದ ಖ್ಯಾತ ನರ್ತಕಿ ಜಯಲಕ್ಷ್ಮೀ ಈಶ್ವರ್. ಈ ಚಿತ್ರದ ತಾರಗಣದಲ್ಲಿದ್ದ ಪ್ರಮುಖರು – ಅನಂತನಾಗ್, ಬಿ.ವಿ. ಕಾರಂತ, ರೇಖಾರಾವ್.

## 'ಹಂಸಗೀತೆ' ಮತ್ತು 'ಬಸಂತ್ ಬಹಾರ್'

ಹಂಸಗೀತೆಯೆಂದರೆ ಏನು? ಇದು ಸಹಜ ಪ್ರಶ್ನೆ. ಇದಕ್ಕೆ ತ.ರಾ.ಸು. ನೀಡುವ ವಿವರಣೆ ಕಾದಂಬರಿಯಲ್ಲಿರುವುದು ಈ ರೀತಿ: "ರಾಜಹಂಸ ತಾನು ಅಂತಿಮವಾಗಿ ಪ್ರಾಣತ್ಯಾಗ ಮಾಡುವಾಗ ಒಂಟಿಯಾಗಿ ಕೊಳದಲ್ಲಿ ತೇಲುತ್ತಾ, ನಿರ್ಜನ ಪ್ರದೇಶವನ್ನು ಸೇರಿ, ಹಾಡುತ್ತಲೇ ಕೊನೆಯುಸಿರೆಳೆಯುತ್ತದಂತೆ. ಹಾಗೆಂದು ಕಾವ್ಯದಲ್ಲಿ ನಾನು ಓದಿದ್ದೆ. ಹಾಗೆಯೇ, ಈ ಜೀವಹಂಸದ ಬಾಳ ಮುಕ್ತಾಯವೂ ಅಂತೆ. ಸಂಗೀತದಲ್ಲಿ ಹುಟ್ಟಿ, ಸಂಗೀತದಲ್ಲಿ ಬೆಳೆದು, ಸಂಗೀತದಲ್ಲಿಯೇ ಕರಗಿಹೋಗುವುದು ಎಂದು ಮುಕ್ತಾಯ". ಆಶ್ಚರ್ಯದ ಸಂಗತಿಯೆಂದರೆ ತ.ರಾ.ಸು. ಅವರ ಕಥೆಯನ್ನಾಧರಿಸಿ ಮೊದಲು ಚಿತ್ರ ಮಾಡಿದವರು ಹಿಂದಿ ಚಿತ್ರರಂಗದವರು. 1956ರಲ್ಲಿ ಈ ಚಿತ್ರವನ್ನು 'ಬಸಂತ್ ಬಹಾರ್' ಹೆಸರಿನಲ್ಲಿ ನಿರ್ಮಿಸಲಾಯಿತು. ಆ ಚಿತ್ರವನ್ನು ನಿರ್ದೇಶಿಸಿದವರು ರಾಜಾ ನವಾತೆ ಅವರು. ಶಂಕರ್ ಜೈಕಿಶನ್ ಸಂಗೀತ ನೀಡಿದ 'ಬಸಂತ್ ಬಹಾರ್' ಆ ಕಾಲಕ್ಕೆ ತನ್ನ ಸಂಗೀತದ ಕಾರಣಕ್ಕೆ ಪ್ರೇಕ್ಷಕರ ಮನಸ್ಸು, ಹೃದಯಗಳನ್ನು ಸೆಳೆಯಿತು. ಚಿತ್ರದ ಪ್ರಮುಖ ಪಾತ್ರಧಾರಿಗಳು ಅಂದಿನ ಖ್ಯಾತ ಕಲಾವಿದರಾದ ಭರತ್ ಭೂಷಣ್ ಮತ್ತು ನಿಮ್ಮಿ. ಈ ಚಿತ್ರಕ್ಕೆ ನಾಲ್ಕನೇ ರಾಷ್ಟ್ರೀಯ ಪ್ರಶಸ್ತಿ ಲಭ್ಯವಾಯಿತು.

## ಸಂಗೀತದ ಜುಗಲ್ಬಂದಿ

'ಹಂಸಗೀತೆ' ಚಿತ್ರದಲ್ಲಿ ಹಾಡಿರುವವರೂ ಸಂಗೀತದ